ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ- ಶ್ರೀ.ಪಿ.ಕೆ.ಎಸ್. ವಕೀಲರಿಂದ ಆರೋಪಿಯ ಪರವಾಗಿ

9. ದಿನಾಂಕಃ 20.01.2024 ರಿಂದ ದಿನಾಂಕಃ 29.10.2024 ರವರೆಗೆ ನನ್ನ ಹಾಗೂ ಆರೋಪಿಯ ನಡುವೆ ವ್ಯವಹಾರಗಳು ಆಗಿತ್ತವೆ. ಸದರಿ ವ್ಯವಹಾರದ ಬಗ್ಗೆ ದಾಖಲಾತಿಗಳು ಆಗಿರುತ್ತವೆ. ದಿನಾಂಕಃ 01.04.2024 ರಿಂದ ದಿನಾಂಕಃ 29.10.2024 ರ ವರೆಗೆ ನನ್ನ ಹಾಗೂ ಆರೋಪಿಯ ನಡುವೆ ಆದ ವ್ಯವಹಾರವನ್ನು ರುಜುವಾತು ಪಡಿಸಲು ನಿಪಿ 9 ನ್ನು ಹಾಜರು ಪಡಿಸಿದ್ದೇನೆ. ಸದರಿ ದಾಖಲಾತಿಯಲ್ಲಿ ಕೊನೆಯ ಕಾಲಂನಲ್ಲಿ ಕಂಡುಬರುವ ಕ್ರೇಡಿಟ್ ಮೊತ್ತಗಳು ನನಗೆ ಬಂದಿರುವ ಹಣಗಳು. ನಿಪಿ 9 ರಲ್ಲಿ ಉಲ್ಲೇಖಿಸಿರುವ ವ್ಯವಹಾರಗಳನ್ನು ಹೊರತು ಪಡಿಸಿ ನನ್ನ ಹಾಗೂ ಆರೋಪಿಯ ನಡುವೆ ಬೇರೆ ಯಾವುದೇ ವ್ಯವಹಾರಗಳು ಇರುವುದಿಲ್ಲ.

10. ನಿಪಿ 9 ರ ಆಧಾರದ ಮೇಲೆ ಆರೋಪಿಯು ನಿಪಿ 1 ರ ಮೊತ್ತವನ್ನು ನನಗೆ ಪಾವತಿ ಮಾಡಲು ಬಾಕಿ ಇದೆ ಎಂದು ನಾನು ಹೇಳುತ್ತಿದ್ದೇನೆ. ಆರೋಪಿಯು ನನಗೆ ನಗದು ಮೂಲಕ, ಚೆಕ್ಕ ಮೂಲಕ, ಫೋನ್ ಪೇ ಹಾಗೂ ಬ್ಯಾಂಕ ವರ್ಗಾವಣೆ ಮೂಲಕ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಫೋನ್ ಪೇ ಖಾತೆಗೆ ಲಿಂಕ್ ಆಗಿರುವ ಮೊಬೈಲ್ ನಂಬರನ ಕೊನೆಯ ನಾಲ್ಕು ಡಿಜಿಟ್‌ಗಳು 0120 ಎಂದರೆ ಸರಿಯಲ್ಲ. ನನ್ನ ಫೋನ್ ಪೇ ಅನ್ನು ಓಪನ್ ಮಾಡಿದರೆ ಅದರಲ್ಲಿ ನನ್ನ ಫೋಟೋ ಕಂಡುಬರುತ್ತದೆ ಎಂದರೆ ಸರಿ. ಸಾಕ್ಷಿದಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಅದು ನನ್ನ ಫೋನ್ ಪೇ ದಾಖಲಾತಿ ಎಂದು ಗುರುತಿಸುತ್ತಾರೆ. ಸದರಿ ದಾಖಲಾತಿಯನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ಅದು ಮತ್ತು ನಿಡಿ 1 ರ ನಂಬರ ಒಂದಕ್ಕೊಂದು ತಾಳೆ ಆಗುತ್ತವೆ ಎಂದರೆ ಸರಿಯಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ, ಅದರಲ್ಲಿ ಕಂಡುಬರುವ ಖಾತೆಯ ಕೊನೆಯ ನಾಲ್ಕು ಡಿಜಿಟ್ 0120 ನಿಮ್ಮ ಖಾತೆಯಾ ಎಂದರೆ ಇಲ್ಲ ಎಂದು ಹೇಳುತ್ತಾರೆ.

11. ಸಾಕ್ಷಿಗೆ ಕೆಲವು ದಾಖಲಾತಿಗಳನ್ನು ತೋರಿಸಿ, ಅವುಗಳಲ್ಲಿ ಕಂಡುಬರುವ ನಂಬರ ಹಾಗೂ ನಿಡಿ 1 ರ ದಾಖಲಾತಿಯ ಫೋನ್ ಪೇ ನಂಬರಗಳು ಒಂದೇ ಎಂದರೆ ಸಾಕ್ಷಿಯು ಇಲ್ಲ ಬೇರೆ ಬೇರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ, ಅದರಲ್ಲಿ ಕಂಡುಬರುವ ಖಾತೆ ಸಂಖ್ಯೆ 178 ನಿಮ್ಮದಾ

ಎಂದರೆ ಸಾಕ್ಷಿಯು ಖಾತೆ ನಂಬರ ಮಾತ್ರ ನನ್ನದು, ಆದರೆ ಅದು ನನಗೆ ಸಂಬಂಧ ಪಟ್ಟಿಲ್ಲ ಎಂದು ಹೇಳುತ್ತಾರೆ. ನನ್ನ ಶ್ರೀ ದೇವಿ ಹಾರ್ಡವೇರ್ ವ್ಯವಹಾರಗಳನ್ನು ಸದರಿ ಖಾತೆಯ ಮೂಲಕ ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ಖಾತೆಯ ಸ್ಟೇಟಮೆಂಟ ಆಫ್ ಅಕೌಂಟನ್ನು ತೆಗೆದರೆ ನನ್ನ ಖಾತೆಗೆ ಯಾರು ಯಾರು ಹಣ ಜಮೆ ಮಾಡಿದ್ದಾರೆ ಎಂದು ಕಂಡು ಬರುತ್ತದೆ ಎಂದರೆ ಸರಿ.

12. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸುವುದಿಲ್ಲ. Tharanathkulal2853@ybl ನನ್ನ ವಿಳಾಸ ಅಲ್ಲ. ನಿಪಿ 7 ರಲ್ಲಿ ಕಂಡುಬರುವ ಮೂರನೇ ದಾಖಲಾತಿಯ ಅಕೌಂಟ ನಂಬರ ನನ್ನದು. ಸದರಿ ಖಾತೆಯ ಕೊನೆಯ ಮೂರು ಡಿಜಿಟ್ 178. ಸಾಕ್ಷಿಗೆ ಒಂದು ಝರಾಕ್ಸ ಪ್ರತಿಯನ್ನು ತೋರಿಸಿ ಅದರಲ್ಲಿ ಕಂಡು ಬರುವ ಖಾತೆ ಸಂಖ್ಯೆ ಹಾಗೂ ನಿಪಿ 7 ರಲ್ಲಿ ಕಂಡು ಬರುವ ಖಾತೆ ಸಂಖ್ಯೆ ಒಂದೇ ಎಂದರೆ ಸಾಕ್ಷಿಯು ನೋಡಿ ಗುರುತಿಸುವುದಿಲ್ಲ.

13. ಆರೋಪಿಯು ಒಟ್ಟು ರೂ. 4,47,000/- ಗಳನ್ನು ಜಮೆ ಮಾಡಿದ್ದಾರೆ ಆದರೆ ಅದು ಯಾವುದು ಎಂದು ಚೆಕ್ ಮಾಡಬೇಕು. ನಿಪಿ 9 ರಲ್ಲಿ ನಿಡಿ 1 ರ ವ್ಯವಹಾರದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇರೆ ವ್ಯವಹಾರಕ್ಕೆ ಮಾಡಿರಬಹುದು ಎಂದು ಹೇಳುತ್ತಾರೆ. ನಿಡಿ 1 ರ ಯಾವುದೇ ಮೊತ್ತ ನಿಪಿ 9 ರಲ್ಲಿ ಕಂಡು ಬರುವುದಿಲ್ಲ. ಸಾಕ್ಷಿ ಮುಂದುವರೆದು ನಿಡಿ 1 ರ ವ್ಯವಹಾರ ಬೇರೆ ವ್ಯವಹಾರ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ